

ಮೇಣದ ಮಹಿಳೆಯ ಮನಸ್ಸಿನೊಳಗೆ ಏನಿರಬಹುದು?

**ಕ್ಯಾಂಡಲ್ ಉದ್ಯಮಿ ಶ್ರೀವಿದ್ಯಾ ಯಶಸ್ಸಿನ ಕಥನ**

# ಬೆಳಕಿನ ಕೃಷಿ

**ಮೇಣದಬತ್ತಿ ಉದ್ಯಮ ಶ್ರೀವಿದ್ಯಾ ಅವರ ಬದುಕಿಗೆ ಬೆಳಕಾಗಿ ಪರಿಣಮಿಸಿದೆ. ಈ ಬೆಳಕನ್ನು ಹಲವು ಮಹಿಳೆಯರ ಪಾಲಿಗೆ ಅವರು ವಿಸ್ತರಿಸುತ್ತಿದ್ದಾರೆ.**

■ **ಉಮಾ ಅನಂತ್**



ಮೇಣದ ಧ್ಯಾನಸ್ಥ ಮೂರ್ತಿ

ಮೈಸೂರಿನ ಶ್ರೀವಿದ್ಯಾ ಕಾಮತ್ ಓದಿದ್ದು ಬಯೊಟೆಕ್ನಾಲಜಿಯಲ್ಲಿ ಎಂ.ಎಸ್ಸಿ. ಹಾಗೂ ಜರ್ನಲಿಸಂನಲ್ಲಿ ಸ್ನಾತಕೋತ್ತರ ಪದವಿ. ಎರಡು ವರ್ಷ ಮೈಸೂರಿನ ಜೆಎಸ್ಎಸ್ ಕಾಲೇಜು ಹಾಗೂ ಒಂದು ವರ್ಷ ಬೆಂಗಳೂರಿನ ಟಿ. ಜಾನ್ ಕಾಲೇಜಿನಲ್ಲಿ ಬಯೊಟೆಕ್ನಾಲಜಿಯಲ್ಲಿ ಬೋಧಕಿಯಾಗಿ ಕೆಲಸ. ನಂತರ, ಬಿಪಿಒ ಹಾಗೂ ಎಂಬಿಎ ಕಾಲೇಜುಗಳಲ್ಲಿ ಕಂಟೆಂಟ್ ಡೆವಲಪರ್ ಆಗಿ ಕೆಲಸ ನಿರ್ವಹಣೆ. ಎಲ್ಲೂ ಕೆಲಸ ಸರಿ ಹೋಗದೇ ಇದ್ದಾಗ 'ಬ್ಲ್ಯಾಕ್ ಅಂಡ್ ವೈಟ್ ಬಿಸಿನೆಸ್ ಸೊಲ್ಯೂಷನ್'ನಲ್ಲಿ ಕಮ್ಯುನಿಕೇಟಿವ್ ಸ್ಕಿಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಣೆ. ಆ ಕೆಲಸವೂ ತೃಪ್ತಿ ನೀಡಲಿಲ್ಲ. ನಂತರ ಮದುವೆಯ ಕಾರಣದಿಂದಾಗಿ ಚೆನ್ನೈಗೆ ಹೋಗಬೇಕಾಯಿತು. ಅಲ್ಲಿ ಕ್ವಾಲಿಟಿ ಅನಾಲಿಸಿಸ್ ಆಫೀಸರ್ ಆಗಿ ಕೆಲಸ. 2014ರಲ್ಲಿ ಚೆನ್ನೈಯಲ್ಲಿ ಭೀಕರ ಪ್ರವಾಹ ಬಂದ ಸಂದರ್ಭದಲ್ಲಿ ಮತ್ತೆ ಬೆಂಗಳೂರಿಗೆ ವಾಪಸ್.

2015ರಲ್ಲಿ ಬೆಂಗಳೂರಿಗೆ ಬಂದು ಸ್ವಂತ ಕಂಪೆನಿ 'ಲೀಡ್ ಟ್ರೈನಿಂಗ್ ಅಂಡ್ ಕಾರ್ಪೊರೇಟ್ ಸೊಲ್ಯೂಷನ್ಸ್' ಶುರು ಮಾಡಿದರು ಶ್ರೀವಿದ್ಯಾ. ಇಲ್ಲಿ ಸಂವಹನ ಕಲೆ, ವೃತ್ತಿ ಕೌಶಲ, ತರಬೇತಿ ಮತ್ತು ಸಂಶೋಧನೆ... ವಿಷಯಗಳ ಕುರಿತು ಆಸಕ್ತರಿಗೆ ಮಾರ್ಗದರ್ಶನ ನೀಡುವ ಕೆಲಸ. ಈ ಕಂಪನಿ ಮೂಲಕವೇ ಇಲ್ಲಿದ್ದ



ಕೆಲಸಗಾರರನ್ನು ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ತರಬೇತಿ ನೀಡಲಾಗುತ್ತದೆ. ಹಾಗೆ ಒಮ್ಮೆ ಔಟ್‌ಬೌಂಡ್ ಲರ್ನಿಂಗ್‌ಗಾಗಿ ಬೆಂಗಳೂರಿನ ಹೊರವಲಯದಲ್ಲಿರುವ ರೆಸಾರ್ಟ್‌ಗೆ ಕರೆದುಕೊಂಡು ಹೋಗಿ ಸಂವಹನ ಕಲೆ ಬಗ್ಗೆ ತರಬೇತಿ ನೀಡಿದರು. ಅಲ್ಲಿ ತರಬೇತಿ ನೀಡುತ್ತಿದ್ದಾಗಲೇ ಶ್ರೀವಿದ್ಯಾ ಬದುಕು ಅನಿರೀಕ್ಷಿತ ತಿರುವು ಪಡೆದುಕೊಂಡಿತು.

## ಬದುಕು ಬದಲಿಸಿದ ಕ್ಯಾಂಡಲ್!

ತನ್ನ ವೃತ್ತಿ ಬದುಕಿನಲ್ಲಿ ಆಕಸ್ಮಿಕ ಬದಲಾವಣೆ